ಬಿಡ್ಲಿಕ್ಕಾಗ್ತದ?' ಅಂತ ವಾದಾ ಮಾಡಿ ನನ್ನ ಒಪ್ಪಿಸಿ ಅವ್ವ ಗಂಗಾನ್ನ ಕರಕೊಂಡು ಖಾನಾಪುರಕ್ಕ ಹೋಗೇಬಿಟ್ಲು. ತುಕಾ ಮತ್ತ ಮಾಮಾ ಬಂದು ಅಲ್ಲೆಲ್ಲಾ ನೋಡಕೊಂಡು ಕೆಲಸಾ ಸುರು ಮಾಡಿದ್ರು. ತುಕಾನ್ನ ಬಿಟ್ಟು ಮಾಮಾ ಹೋದ.

ಗಂಗಾ ಈಗ ಸೆರಗು ಕಟಗೊಂಡ ನಿಂತ್ಲು. ಎಮ್ಮಿ, ಆಕಳಾ ಕಟ್ಟಿದ್ರು. ಮನಿ ಸುತ್ತ ಕಾಯಿಪಲ್ಯ ಬೆಳದು ವಾರಾ ವಾರಾ ಮಾರಿದ್ರು. ಹೊಲಾ, ತ್ವಾಟದ್ದು ಉತ್ಪನ್ನ ಬೇಕಾದಷ್ಟು ಬರತಿತ್ತು. ಒಮ್ಮೆ ಮುಂಬೈಯಿಂದ ಮಾಲಕರು ಬಂದು ಅರ್ಧ ತೊಗೊಂಡು ಹೋದರು. ಆಮ್ಯಾಲೆ 'ನೀವ ಮಾರಿಕೋರಿ' ಅಂದ್ರು. ಗಂಗಾ ಹೊಲಿಗಿ ಬಿಡಲಿಲ್ಲ. ಒಂದ ಪೈಸಾ ಕಳೀದ ಕೂಡಿಸಿಟ್ಲು. ನಾಕ ವರ್ಷದಾಗ ಒಂದಿಷ್ಟು ರೊಕ್ಕಾಗಿತ್ತು. ನನಗ ಎರಡು ಮಕ್ಕಳಾಗಿದ್ದು. ಈ ಸರೆ ಬಂದಾಗ ಮುಂಬೈದಾವ್ರು 'ಅಮೆರಿಕಾದಾಗ ಮಗನ ಕಡೆ ಸೆಟಲ್ ಆಗ್ತೇವಿ. ಎಲ್ಲಾ ಮಾರಿ ಬಿಡ್ತೇವಿ. ತೊಗೊತಿದ್ರ ನಿಮಗ ಕಮಿಗೆ ಕೊಡ್ತೇವಿ' ಅಂದರು. ಗಂಗಾನ ಧೈರ್ಯ ಮಾಡಿ ಮದ್ಲ ತನ್ನ ರೊಕ್ಕಾ ಕೊಟ್ಲು. ನಾ ಒಂದಿಷ್ಟು ಸಾಲಾ ತಗದು ಕೊಟ್ಟೆ. ಮಾಮಾನೂ ಸಹಾಯ ಮಾಡಿದ. ಬ್ಯಾಂಕ್‌ನ್ಯಾಗ ತುಕಾನ ಹೆಸರಲೆ ಸಾಲಾ ತಗದ್ವಿ. ಇಷ್ಟು ಧೊಡ್ಡ ಆಸ್ತಿ ನಮ್ಮದಾತು. ಮಾಮಾ ಬರೇ ರೊಕ್ಕಾ ಕೊಡಲಿಲ್ಲ ಮಗಳ್ನೂ ತುಕಾಗ ಕೊಟ್ಟು ಮದವಿ ಮಾಡಿದ. ಅವ್ವ ನೋಡಿ ಭಾಳ ಸಂತೋಷಬಟ್ಲು. ಮನಿ ಕೆಲಸಾ ಮಾಡಿ ಜೀವನಾ ಮಾಡಿದ ಊರಾಗ 'ಮಾಲಕಿಣ ಬಾಯಿ'(ಯಜಮಾನಿತಿ) ಆದೆ ಅಂತ ಬತ್ತಿ ಹೋಗಿದ್ದ ಎದಿ ಉಬ್ಬಸಿದ್ಲು. ಗಂಗಾನ್ನ ನೋಡಿ 'ನಿಂದೊಂದನ ತ್ರಾಸಾತು ಪೋರಿ' ಅನಕೋತ ಕೊರಗಿನ್ಯಾಗ ಜೀಂವಾ ಬಿಟ್ಲು.

ಎಷ್ಟ ಅತ್ತರೂ ಹೋದಾವ್ರು ತಿರಗಿ ಬರುದುಲ್ಲ. ಕಾಲ ಯಾವುದಕ್ಕೂ ಕಾಯುದಿಲ್ಲ ಅನ್ನೋಹಂಗ ದಿನಗೊಳು ಓಡಲಿಕ್ಕತ್ತಿದ್ವು. ರಾಜು ಧೊಡ್ಡಾಂವಾಗ್ಲಿಕ್ಕತ್ತಿದ್ದಾ. ಮಾಮಾಗೊಳ ಜೋಡಿ ಹೊಂದಕೊಂಡಾ. ತುಕಾನ್ನ ಭಾಳ ಹಚಗೊಂಡಾ. ತುಕಾಗೂ ಎರಡ ಮಕ್ಕಳು. ನಾ ಗಂಗಾಗ ಎಷ್ಟೋ ಸರೆ 'ರಾಜುನ ಚಿಂತಿ ಬಿಡು. ನಮ್ಮ ಮಗನ ಗತೆ ಬೆಳಸತೇವಿ. ಮುಂಬೈ, ಪುಣೆ ಕಡೆ ವರಾ ಸಿಗತಾವ. ಹುಡುಕಿ ನಿನಗ ಮದವಿ ಮಾಡ್ತೇವಿ' ಅಂತ ಹೇಳೇ ಹೇಳಿದೆ. ಅಕಿ ಕೇಳ್ಲೇ ಇಲ್ಲ. 'ಕಟಗೊಂಡಾಂವಾ ಭೊಲೊ ಇರ್ತಾನಂತ ಯಾತರ ಮ್ಯಾಲಿಂದ? ಒಮ್ಮೆ ಅನಭೋಗಿಸಿದ್ದ ಸಾಕು. ಅಲ್ಲದ ಕೂಸಿನ್ನ ಬಿಟ್ಟು ಹೋಗೋ ವಿಚಾರನ ಇಲ್ಲ. ದಯಮಾಡಿ ಇನ್ನೊಮ್ಮೆ ವಿಷಯಾನ ಎತ್ತಬ್ಯಾಡ್ರಿ' ಅಂದಬಿಟ್ಲು. ಎಲ್ಲಾರೂ ಸುಮ್ಮನಾಗಿಬಿಟ್ವಿ. ಹಿಂಗ ಹಳೇ ಅಜ್ಜಿ ಕಥಿವಳಗ ಹೇಳ್ತಾರಲಾ 'ಕಡೀಕ ಎಲ್ಲಾ ಭೊಲೊ ಆತು. ಎಲ್ಲಾರೂ ಆರಾಮ ಇದ್ದರು' ಅಂತ ಹಂಗ ಹೇಳಬಹುದು ನೋಡ್ರಿ ಗಂಗಾನ್ನ ಕೊರಗೊಂದು ಬಿಟ್ಟು. ಇದು ಅವರ ಮನಿ ಕಥಿ" ಎಂದು ನಿಲ್ಲಿಸಿ ದೀರ್ಘವಾಗಿ ನಿಟ್ಟುಸಿರು ಬಿಟ್ಟ. "ಸರ್, ಒಂದ ತಪ್ಪಾಗೇದ್ರಿ. ಕಥಿ ಹೇಳ ಕೇಳಕೋತ ಇಬ್ಬರೂ ಬೆಳಗಾವಿ ದಾಟಿ ಖಾನಾಪುರದಾಗ ಬಂದು ಬಿಟ್ಟೇವಿ. ಲಕ್ಷ ಇಲ್ಲ. ನಮ್ಮನಿಗೆ ಹೋಗಿ ಛಾ ಕುಡದು ತಿರಗಿ ನಿಮ್ಮನ್ನ ಬೆಳಗಾವಿ ಮುಟ್ಟಸತೇನಂತ" ಎಂದ. ''ಹ್ಞಾಂ!'' ಎಂದವನೇ ಅಚ್ಚರಿಯಿಂದ ನೋಡಿದೆ. ಕಾರು ಆಗಲೇ ಅವನ ಮನೆ ಸಮೀಪಿಸುತ್ತಿತ್ತು. ಸುಮ್ಮನಾದೆ.

ಮನೆಯ ಜನರೆಲ್ಲ ಹೊರಗೆ ಜಮಾಯಿಸಿದ್ದರು. ಹೊಸ ಕಾರಿಗೆ ಹಾರ ಹಾಕಿ, ಕಾಯಿ ಒಡೆದು ಧೂಪಾರತಿ ಮಾಡಿದರು. ಮೂರ್ನಾಲ್ಕು ಮಕ್ಕಳು ಕಾರನ್ನು ಮುಟ್ಟಿ ತಕತಕ ಕುಣಿಯುತ್ತಿದ್ದವು. ಅವನ ಅಣ್ಣಅತ್ತಿಗೆ, ಅಕ್ಕತಂಗಿಯರ ಪರಿಚಯ ಮಾಡಿಸಿದ. ಮಕ್ಕಳು ಆಗಲೇ ಒಳಗೆ ಹತ್ತಿ ಕುಳಿತಿದ್ದರು. ಅವರಣ್ಣ ನನಗೆ ಹೊಲ, ತೋಟ, ತೋರಿಸುವವರೆಗೆ ಊರನ್ನೊಂದು ಬಾರಿ ಸುತ್ತಿ